ಅಧ್ಯಕ್ಷರು : ಆಯಿತು, ಇದನ್ನು ನಾಳೆ ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ.

ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ : ಕೃಷ್ಣ ಲಿಫ್ಟ್ ಇರಿಗೇಷನ್ ಬಗ್ಗೆ discussion ಆಗಬೇಕಾಗಿದೆ.

ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಶಾಸಕರುಗಳಾದ ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ ಮತ್ತು ಶ್ರೀ ಎಂ.ಬಿ.ಪಾಟೀಲ್ ರವರು ಸದನದ ಬಾವಿಗೆ ಬಂದರು)

ಶ್ರೀ ಸಿದ್ದರಾಮಯ್ಯ : ಕೃಷ್ಣಕೊಳ್ಳದಲ್ಲಿ ಸಮಸ್ಯೆ ನಿರ್ಮಾಣವಾಗಿದೆ. ಇದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರ ಚರ್ಚೆ ಮಾಡುವುದಕ್ಕೆ ತಯಾರಿರುತ್ತದೆ.

(ಗೊಂದಲ)

ಅಧ್ಯಕ್ಷರು : ನಾಳೆ ಬೆಳಿಗ್ಗೆ ಪ್ರಶ್ನೋತ್ತರ ಮುಗಿದ ನಂತರ ತೆಗೆದುಕೊಳ್ಳೋಣ.

ಅಧ್ಯಕ್ಷರು : ನಾಳೆ ಬೆಳಿಗ್ಗೆ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಪ್ರಶ್ನೋತ್ತರ ಆದ ಕೂಡಲೇ ತೆಗೆದುಕೊಳ್ಳೋಣ.

(ಗೊಂದಲ)

ಅಧ್ಯಕ್ಷರು : ನಿಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ. ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ನಗರಾಭಿವೃದ್ಧಿ ಸಚಿವರು) : 14 ಜಿಲ್ಲೆಗಳು ಶೇಕಡ 61 ರಲ್ಲಿದ್ದಾರೆ. ನಿಜವಾಗಲೂ ಕೂಡ ಇದು ಮಹತ್ವವಾದ ವಿಚಾರ. ನಾಳೆ ಇದರ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರೆ, ಪ್ರಶ್ನೋತ್ತರ ಆದ ಕೂಡಲೇ ಇದನ್ನು ತೆಗೆದುಕೊಳ್ಳಬೇಕು.

(ಈ ಹಂತದಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳಾದ ಶ್ರೀ ಪಾಟೀಲ್ ನಡಹಳ್ಳಿ, ಶ್ರೀ ಅಪ್ಪಾಜಿ ನಾಡಗೌಡ ಹಾಗೂ ಶ್ರೀ ಎಂ.ಬಿ. ಪಾಟೀಲ್ ರವರು ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ನಮ್ಮದು ಸ್ವಲ್ಪ ಕೇಳಿ.

ಶ್ರೀ ವೆಂಕಟರಾವ್ ನಾಡಗೌಡ : ನಿನ್ನೆ ಸದನದಲ್ಲಿ ಭತ್ತದ ಬಗ್ಗೆ ಇವತ್ತು statement ಮಾಡುವುದಾಗಿ ಹೇಳಿದ್ದರು.

(ಗೊಂದಲ)

(ಈ ಹಂತದಲ್ಲಿ ಜೆ.ಡಿ.ಎಸ್. ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಕೆ. ರಾಜುರವರು ಬಾವಿಯೊಳಗೆ ಪ್ರವೇಶಿಸಿ ಮನವಿ ಮಾಡಿ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ನಮ್ಮ ಕಡೆ ಸ್ವಲ್ಪ ಗಮನ ಹರಿಸಿ. ನಾವು ಬಹಳ ದಿವಸಗಳಿಂದ ಹೇಳುತ್ತಿದ್ದೇವೆ. ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ. ಮಾನ್ಯ ಶಾಸಕರು ಬಹಳ ದಿವಸಗಳಿಂದ ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಭತ್ತದ ಬೆಂಬಲ ಬೆಲೆ ಬಗ್ಗೆ ಘೋಷಣೆ ಮಾಡುತ್ತೇವೆಂದು ಕೃಷ ಸಚಿವರು ತಿಳಿಸಿದರು. ಮಾನ್ಯ ಮುಖ್ಯಮಂತ್ರಿಗಳಾದರೂ ದಯಮಾಡಿ ಈ ಬಗ್ಗೆ statement ಕೊಡಬೇಕು. ಕೃಷಿ ಸಚಿವರು ಮಾತನಾಡಬೇಕು. ದಯವಿಟ್ಟು ಮುಖ್ಯಮಂತ್ರಿಗಳು ಹೇಳಬೇಕು.

(ಗೊಂದಲ)

ಅಧ್ಯಕ್ಷರು : ಹೀಗೆ ಮಾತನಾಡಿದರೆ ನಾನು ಏನು ಹೇಳಬೇಕು. ಪ್ಲೀಸ್ ಎಲ್ಲಾ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಈಗ ನಮ್ಮ ರಾಜ್ಯದ ಭತ್ತದ ಬೆಲೆ ಬಗ್ಗೆ ದಯಮಾಡಿ ಹೇಳಿ ಸ್ವಾಮಿ. ಕೃಷಿ ಸಚಿವರು ಭತ್ತದ ಬೆಲೆ ಹೇಳಬೇಕು. ಈಗಾಗಲೇ ಸಾಯಂಕಾಲ ಆಯಿತು.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಇವತ್ತು ಮಧ್ಯಾಹ್ನದೊಳಗೆ ಮಾನ್ಯ ಕೃಷಿ ಸಚಿವರು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಿ ಭತ್ತದ ಬೆಂಬಲ ಬೆಲೆ ನಿಗದಿ ಮಾಡುತ್ತೇವೆಂದು ಹೇಳಿದ್ದರು. ಈಗಾಗಲೇ ಸಾಯಂಕಾಲ ಆಯಿತು. ಇನ್ನು ಅರ್ಧಗಂಟೆ ಮುಗಿದರೆ ಸದನ ಮುಕ್ತಾಯ ವಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಹಾಲಪ್ಪ : ಮಾನ್ಯ ಅಧ್ಯಕ್ಷರೆ, ಭತ್ತದ ಬೆಲೆ 1070–1080 ರೂಪಾಯಿಗಳಿಗೆ ಕೇಂದ್ರ ಸರ್ಕಾರ ತೆಗೆದುಕೊಳ್ಳುವುದಕ್ಕೆ ತಯಾರು ಇದೆ. ರೈತರ ಭತ್ತವನ್ನು ವ್ಯಾಪಾರಸ್ಥರು 700–800 ರೂಪಾಯಿಗಳಿಗೆ ಖರೀದಿ ಸುತ್ತಿದ್ದಾರೆ. ದಯವಿಟ್ಟು ಅದರ ಬಗ್ಗೆ ಸರ್ಕಾರ ಉತ್ತರ ಹೇಳಬೇಕು.

(ಗೊಂದಲ)

ಅಧ್ಯಕ್ಷರು : ಈಗ ಕೃಷಿ ಮಂತ್ರಿಗಳು ಸದನದಲ್ಲಿ ಸಮಯಕ್ಕೆ ಸರಿಯಾಗಿ ಇರುವುದಿಲ್ಲ. ನಿಮ್ಮಷ್ಟಕ್ಕೆ ನೀವು ಎದ್ದು ಹೋಗುತ್ತೀರಿ. You must answer.

ಶ್ರೀ ಸಿದ್ದರಾಮಯ್ಯ : ಭತ್ತದ ಬಗ್ಗೆ ಮಾತನಾಡಿ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ತಿಳಿಸಿ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಈಗ ಪ್ರಶ್ನೋತ್ತರವನ್ನು suspend ಮಾಡುವಿರಾ? ಅಥವಾ ಪ್ರಾರಂಭಿಸುವಿರಾ?

ಅಧ್ಯಕ್ಷರು : ಪ್ರಶ್ನೋತ್ತರ ಮಾಡೋಣ..

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ನಾಳೆ ಶೂನ್ಯವೇಳೆಯಲ್ಲಿ ಬಹಳ ಮುಖ್ಯವಾದ ವಿಚಾರ ಮಡೆಸ್ನಾನ. ಇಲ್ಲಿ ನಮ್ಮ ಮುಜರಾಯಿ ಸಚಿವರು ಇದ್ದಾರೆ. ನಾವು ಮಡೆಸ್ನಾನದ ಬಗ್ಗೆ ಚರ್ಚೆ ಮಾಡಿಲ್ಲ. ಈ ವಿಚಾರವನ್ನು ಈ ಸದನದಲ್ಲಿ ಏಕೆ ಬಹಳ casual ಆಗಿ ತೆಗೆದುಕೊಳ್ಳುತ್ತಿದ್ದೀರಿ? ಯಾವ ನಿಯಮದ ಅಡಿ ಮಡೆಸ್ನಾನದಂಥ ಅನಿಷ್ಟ ಪದ್ಧತಿ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಚರ್ಚೆ ಆಯಿತಲ್ಲಾ, ಅದನ್ನು ಇಲ್ಲಿ ಬಹಳ casual ಆಗಿ ಏಕೆ ತೆಗೆದುಕೊಂಡಿದ್ದೀರಿ? ಅದರ ಬಗ್ಗೆ ನಾಳೆ ಶೂನ್ಯವೇಳೆಯಲ್ಲಿ ಈ ವಿಷಯ ತೆಗೆದುಕೊಳ್ಳಿ.